ಆದ್ರೆ ಉಣ್ಣಕ್ಕೂ ಶಾಸ್ತ್ರಿಯಿಂದ ಬಿಡಿಗಾಸು ಈಸ್ಕೊಳ್ಳುವ ಗ್ರಾಚಾರ ನನ್ನದಾಗಿರುವುದರಿಂದ, ಆ ಗತ ವೈಭವದ ದಿನಗಳನ್ನು ಯೋಚಿಸಿ ಏನು ಫಲ? ಬಿಡಿ ಹಳೆ ಕಥೆಯೆಲ್ಲ ಯಾಕೆ. ನಾಸ್ಟಾಲ್ಜಿಯಾದ ಅಮಲಲ್ಲಿ ಈಗ ಕುಡಿದ ಬಿ.ಎಸ್ಪಿ ಗ್ರೇಯ ಕೆಟ್ಟ ರುಚಿಯನ್ನು ಮರೆಯಲು ಚೂಯಿಂಗ್ ಗಮ್ಮನ್ನು ಬಾಯಿಗೆ ಹಾಕಿ ಆ ಡಿಪಾರ್ಟ್‌ಮೆಂಟಿನ ಗೇಟು ದಾಟಿ ಒಳಗೆ ನುಗ್ಗಿದೆ.

ಆಶ್ಚರ್ಯವಾಯಿತು, ಊರಿನ ಪುರಸಭೆಯ ಪಕ್ಕವೇ ಇದ್ದ ಈ ಜಾಗ ನಿರ್ಜನ ವೈಖರಿಯಲ್ಲಿ ಝುಳಪಿಸುವುದ ಕಂಡು... ಬ್ರಿಟಿಷ್ ಕಾಲದ ಕಟ್ಟಡವದು. ಗೋಡೆಗಳು ಆಂಗ್ಲರ ಕೆಂಪಲ್ಲಿ ಅದ್ದಿ ಹೋಗಿದ್ದವು. ಮಂಗಳೂರು ಹೆಂಚಿನ ಹಳೆಯ ಕಾಲದ ಬಂಗ್ಲೆಯನ್ನು ಸರಕಾರದವರು ಕಾರ್ಯಾಲಯವಾಗಿ ಪರಿವರ್ತಿಸಿರಬೇಕು. ನಾನಿದ್ದ ವಿರುದ್ಧ ದಿಕ್ಕಿನಲ್ಲಿ ಇದೇ ಕಚೇರಿಯ ಇನ್ನೊಂದು ಕೋಣೆಯ ಬಿಳಿ ಸರಳಿನ ವಿಶಾಲ ಗವಾಕ್ಷದತ್ತ ನನ್ನ ದೃಷ್ಟಿ ಅಪ್ರಜ್ಞಾಪೂರ್ವಕವಾಗಿ ಹರಿಯಿತು. ಕತ್ತಲನ್ನು ಕಂಬಿಗಳ ವ್ಯಾಪ್ತಿಯಿಂದ ಆಚೆ ಇಟ್ಟಂತೆ ತೋರುತ್ತಿದ್ದ ಆ ಜಾಗ ಇದ್ದಕಿದ್ದಂತೆ ತನ್ನಷ್ಟಕ್ಕೆ ತಾನೇ ಓಲಾಡುತಿತ್ತು. ನಡುಹಗಲಲ್ಲಿ ಎಣ್ಣೆ ಹೊಡೆದರೆ ಹೀಗೆಲ್ಲ ಭ್ರಮೆಯಾಗುತ್ತದೆಯೆಂದು ಬಲ್ಲವರು ಹೇಳಿದ್ದನ್ನು ಕೇಳಿದ್ದೆ. ಈಗ ಆ ಮಾತನ್ನು ನಾನೇ ಅನುಭವಿಸುತ್ತಿದ್ದೇನೆಯೇ? ಹಾಗೇ ಆ ಕಿಟಕಿಯತ್ತ ನಡೆದೆ. ಆಗಾಗ ಅಲ್ಲೊಂದು ನೆರಳು ನುಲಿಯುತ್ತಿತ್ತು. ಅರರೆ ಆ ನೆರಳಿಗೆ ಆಕಾರವಿದೆ...! ಅಲ್ಲೊಬ್ಬ ಮುದುಕ ನಿಜಕ್ಕೂ ನಿಂತು ಸರಳುಗಳ ಮೂಲಕ ಆಚೆ ಹಬ್ಬಿರುವ ಅವಕಾಶವನ್ನು ಚಾಚೂ ತಪ್ಪದೆ ಪರಿಶೀಲಿಸುತ್ತಾ ಇದ್ದಾನೆ! ಆತನ ಹತ್ತಿರ ಬಂದ ಮೇಲೆ ಅಲ್ಲಿದ್ದ ಕಂಬದ ಮೇಲೆ ಕೈಯಿಟ್ಟು ನಾನೂ ಈತನನ್ನೇ ದಿಟ್ಟಿಸಿದೆ... ಆ ಹಿಂತಲೆಯ ಸುತ್ತ ಮಾತ್ರ ನೆರೆತಿದ್ದ ಬಿಳಿಕೂದಲು ಕಂಡಿತು. ಖಾದಿ ಶರ್ಟು ಹಾಕಿದ್ದ ಆ ವೃದ್ಧನದ್ದು ಕೃಶ ಶರೀರ. ನನ್ನ ಇರುವಿಕೆಯ ಅರಿವೇ ಇಲ್ಲದೇ ಆತನ ಇಣುಕುವ ಕಾಯಕ ನೆರವೇರಿತ್ತು. ಈ ಬೊಕ್ಕ ತಲೆಯ ಮುದುಕ ಹೀಗೆ ಮೈಮರೆಯಲು ಕಾರಣವಾದ ಆ ಪಾರ್ಶ್ವದಲ್ಲಿ ಚಾಲ್ತಿಯಲ್ಲಿರುವ ದೃಶ್ಯವೆಂಥದಪ್ಪ! ಮಧ್ಯ ಮಧ್ಯ ಆತ ಬಗ್ಗಿ ನೋಡುತ್ತಾ ಇದ್ದಂತೆಲ್ಲ 'ಹಿಸ್ಸ್ ಹಿಸ್ಸ್... ಹಿಸ್ಸ್... ಸ್ಸ್... ಅಂತ ಪಿಸುಗುಡುವ ದನಿಯಲ್ಲಿ ಆತ ಭುಸುಗುಡುತ್ತಲೂ ಇದ್ದದ್ದು ಕೇಳಿತು ನನಗೆ. ನನಗೆ ತಾಳಲಾಗದೆ ಕೊನೆಗೂ ಕೇಳಿದೆ,

'ಏನ್ರೀ ಅದು...?'

ಹಾವು ಕಚ್ಚಿದಂತೆ ಪಟಕ್ಕನೇ ರಿವರ್ಸ್ ಟರ್ನ್ ಜಂಪ್ ಮಾಡಿದ ಮುದುಕ ಆತುರಾತುರವಾಗಿ, 'ಕೇಳಿಸ್ತಾ... ನಿಮ್ಗೆ ಸಹ ಕೇಳಿಸ್ತಾ...' ಅಂದ.

ಹಳೆಯ ಕನ್ನಡಕವನ್ನು ಹಾಕಿದ್ದ ಆತ ಮೈಗೆಲ್ಲ ಸಿಲ್ವರ್ ಪೇಂಟ್ ಬಳಿದುಕೊಂಡು, ರಾಷ್ಟ್ರಪಿತ ಗಾಂಧೀಜಿಯಂತೆ ಸುಡುವ ಬಿಸಿಲನ್ನು ಲೆಕ್ಕಿಸದೆ ಗಂಟೆಗಟ್ಟಲೇ ಒಂದೇ ಪೊಸಿಷನ್ನಿನಲ್ಲಿ ನಿಲ್ಲುವ ಬಾಪೂಜಿಯ ಮುದಿ ಛದ್ಮವೇಷ ಕಲಾವಿದರನ್ನು ನೆನಪಿಸಿದ. ಪದೇ ಪದೇ ಆತ ನಾಲಗೆ ತುದಿಯಿಂದ ತುಟಿಗಳ ಮೂಲೆಯನ್ನು ಸವರಿಕೊಳ್ಳುತ್ತಲಿದ್ದ.

'ಹ್ಞಾ... ನೀವೇ ಪುಸ್ಸ್ ಪುಸ್ಸ್ ಅಂತಿದ್ರಿಲ್ಲ... ಕೇಳಕ್ಕೇನಿದೆ ಅದ್ರಲ್ಲಿ...'

ಆಗ ಕೊಂಚ ನಿರಾಶೆಗೊಂಡಂತೆ ಕಂಡರೂ ಆತ ಮತ್ತೆ ಉತ್ತೇಜಿತನಾಗಿ 'ಅದು ನಾನಲ್ಲ ಮಾರ್‍ರ್ರೇ... ಅದ್... ಅದ್ ಅವ್ರು... ಅವ್ರು ಶುರು ಮಾಡಿದ್ದಾರೆ ಇವತ್ತಿನ ಕೆಲ್ಸ...' ಅಂದ.

ಎಲಾ... ನಾನೇ ಕುಡುಕ ಅಂದುಕೊಂಡ್ರೆ ಈತ ಕುಡಿಯದ ಅರಳುಮರಳು ಮುದುಕನೇ ಸರಿ. ಈ ಸಂಭಾಷಣೆ ಹೀಗೆ ಮುಂದುವರೆಯಬಾರದು ಎಂದುಕೊಂಡು 'ಇಲ್ಲೇನ ಕೆಲ್ಸ್ ನಿಮ್ದು...' ಅಂತ ಕೇಳಿದೆ. ಆತ ಮಾತನಾಡುವ ಕಂಪನಿಗೆ ಹಂಬಲಿಸುತ್ತಾ ಇದ್ದ ಮುದುಕ ಎಂದು ನನಗೆ ತಿಳಿದದ್ದೇ ಆಗ. ತಾನ್ಯಾರು, ತಾನೇಕೆ ಅಲ್ಲಿಗೆ ಹೋಗಿದ್ದೇನೆ... ಆತ ಎಲ್ಲ ಕಂತೆಪುರಾಣ ಒಪ್ಪಿಸುತ್ತಲೇ ಹೋದ. ಈ ಅಜ್ಜಯ್ಯ ಇದೇ ಆಫೀಸಿನ ಅಸಿಸ್ಟೆಂಟ್ ಆಫೀಸರಂತೆ... ಕಳೆದ ನಾಲ್ಕು ದಶಕಗಳಿಂದ ಇದೇ ಇಲಾಖೆಯವನಂತೆ... ಈಗ ರಿಟೈರ್ ಆದರೂ ಸರಕಾರದ ಸೇವೆ ದೇವರ ಸೇವೆ ಎಂದೇ ನಂಬಿ ಇನ್ನೂ ಸಿಗುವ ಮೂರು ಮತ್ತೊಂದು ಪಿಂಚಣಿ ಸ್ವೀಕರಿಸುತ್ತಾ ಇಡೀ ಕಚೇರಿಯನ್ನು ನೋಡಿಕೊಳ್ಳುತ್ತಾ ಇರುವವನಂತೆ. ಇನ್ನೇನು ಪರ್ವತನೇನಿಯ ಕಂಪನಿಯ ಜೊತೆ ಈ ಸರಕಾರಿ ಇಲಾಖೆಯೂ ವಿಲೀನಗೊಳ್ಳುವುದರಿಂದ ಇತ್ತೀಚೆಗೆ ಗವರ್ನ್‌ಮೆಂಟ್ ಔಟ್ ಸೋರ್ಸ್ ವ್ಯವಸ್ಥೆಯ ಮುಖಾಂತರ ಆಗಾಗ ಯಾರ್‍ಯಾರೋ ಜನರನ್ನು ಇಲ್ಲಿಗೆ ವರ್ಗಾಯಿಸುತ್ತಾ ಇರುತ್ತಾರಂತೆ. ಆದರೆ, ಈತ ಮಾತ್ರ